ಪ್ರಾಥಮಿಕ ಶಾಲೆಗಳಿಗೆ ಅನುದಾನವನ್ನು ಕೊಡತಕ್ಕಂತಹ ಅವಶ್ಯಕತೆ ಏನು ? ಈ ರೀತಿ ಹಣವನ್ನು ತೆಗೆದುಕೊಳ್ಳುತ್ತಿರುವುದನ್ನು ತಡೆಯಲಾಗುವುದು ಎಂಬುದಾಗಿ ಸರ್ಕಾರದವರು ಹಿಂದೆ ಹೇಳಿದ್ದರು. ಆ ಪ್ರಕಾರ ಈವರೆಗೆ ಎಷ್ಟು ಶಾಲೆಗಳಿಗೆ ಸರ್ಕಾರದಿಂದ ಕೊಡತಕ್ಕಂತಹ ಅನುದಾನವನ್ನು ತಡೆ ಹಿಡಿದಿದ್ದೀರಿ ? ಅಂತಹ ಶಾಲೆಗಳ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಡಿ. ಮಂಜುನಾಥ್.—ಇದರ ಬಗ್ಗೆ ಅನೇಕ ಕಡೆಯಿಂದ ನಮಗೆ ದೂರುಗಳು ಬಂದಿವೆ. ಬಂದಿದ್ದರೂ ಸಹ ಕೆಲವು ಶಾಲೆಗಳಿಗೆ ಅನುದಾನವನ್ನು ನಿಲ್ಲಿಸಿದ್ದೇವೆ. ಅವರ ಮೇಲೆ ಕ್ರಮ ತೆಗೆದು ಕೊಂಡಿದ್ದೇವೆ. ಕಾನೂನು ಪ್ರಕಾರ ಇವತ್ತಿನ ದಿವಸ ನಮಗೆ ಸ್ವಲ್ಪ ಕಷ್ಟವಾಗಿದೆ. ಸಮಗ್ರ ಶಿಕ್ಷಣ ಮಸೂದೆ ಕೇಂದ್ರ ಸರ್ಕಾರದ ಒಪ್ಪಿಗೆಗೋಸ್ಕರ ಹೋಗಿದೆ. ಅದು ಬಂದ ಮೇಲೆ ಅದರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ವೇದಾಂತ ಹೆಬ್ಬಾರ್.—ನರ್ಸರಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಪ್ರವೇಶವನ್ನು ಕಡ್ಡಾಯ ವಾಗಿ ಇಲಾಖೆಯ ಮೂಲಕ ಅಂದರೆ ಆಯಾ ಶಾಲೆಗಳಲ್ಲಿ ಎಷ್ಟು ಹುಡುಗರಿಗೆ ಪ್ರವೇಶವಕಾಶವನ್ನು ಕೊಡಬಹುದೆಂಬುದು ಸಂಗ್ರಹ ಮಾಡಿ ಅದನ್ನು ನೇರವಾಗಿ ಸರ್ಕಾರವೇ ಹಂಚುವಂತಹ ಪ್ರಯತ್ನ ಬಗ್ಗೆ ಯೋಚನೆ ಮಾಡಿದೆಯೇ ? ಪ್ರಾಥಮಿಕ ಶಾಲೆಗಳಿಗೆ ಶಿಕ್ಷಕರ ಪೂರ್ತಿ ಸಂಬಳವನ್ನು ಕೊಡು ವುದರ ಜೊತೆಗೆ ಕಟ್ಟಡದ ಬಾಡಿಗೆಯನ್ನೂ ಸಹ ಸರ್ಕಾರ ಅನುದಾನದ ರೂಪದಲ್ಲಿ ಕೊಡುತ್ತಿದೆ. ಆದ್ದರಿಂದ ಪ್ರಾಥಮಿಕ ಶಾಲೆಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ ಸರ್ಕಾರ ಏನಾದರೂ ಚಿಂತನೆ ಮಾಡಿದೆಯೇ ?

ಶ್ರೀ ಡಿ. ಮಂಜುನಾಥ್.—ಸ್ವಾಮಿ, ರಾಷ್ಟ್ರೀಕರಣ ಮಾಡುವುದು ಬಹಳ ಕಷ್ಟ. ಏಕೆಂದರೆ, ನಾವು ಎಲ್ಲರಿಗೂ ಇಡೀ ಸಮಾಜಕ್ಕೆ ಸರ್ಕಾರದ ಖರ್ಚಿನಲ್ಲಿ ಇವತ್ತು ವಿದ್ಯಾಭ್ಯಾಸ ಕೊಡುವುದು ಕಷ್ಟ ಇದೆ. ಈ ಬಗ್ಗೆ ಖಾಸಗೀ ಸಂಸ್ಥೆಗಳು ಮುಂದೆ ಬಂದಾಗ ಅವಕ್ಕೆ ಪರವಾನಿಗೆ ಕೊಡುತ್ತೇವೆ. ಕೆಲವು ಜನ ಶಾಲೆಗಳನ್ನು ಚೆನ್ನಾಗಿ ನಡೆಸುತ್ತಿದ್ದಾರೆ. ಕೆಲವು ಕಡೆ ದೂರುಗಳು ಬಂದಿವೆ. ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಡೆಸುತ್ತಿರುವವರಿಗೆ ನಾವು ಅನುದಾನ ಕೊಡುತ್ತಾ ಇಲ್ಲ. ಎಲ್ಲಾ ಶಾಲೆ ಗಳನ್ನು ನ್ಯಾಷನಲೈಸ್ ಮಾಡುವುದು ಕಷ್ಟವಾಗುತ್ತದೆ.

ಶ್ರೀ ವೇದಾಂತ ಹೆಬ್ಬಾರ್.—ಪ್ರಾಥಮಿಕ ಶಾಲೆ ಹಾಗೂ ನರ್ಸರಿ ಶಾಲೆಗಳಿಗೆ ಪ್ರವೇಶಕ್ಕೆ ಎಲ್ಲೆಲ್ಲಿ ೫೦೦, ೧ ಸಾವಿರ, ೨ ಸಾವಿರ ರೂಪಾಯಿಗಳನ್ನು ಪಡೆದುಕೊಳ್ಳುತ್ತಾರೆ ಅಲ್ಲಿ ನೇರವಾಗಿ ಹೋಗಿ ಖಟು ಕೇಳುತ್ತಾರೆ. ಆದ್ದರಿಂದ ವಿದ್ಯಾ ಇಲಾಖೆಯಿಂದ ಪ್ರವೇಶ ತವಾಗಿ ಆಯಾಯ ಶಾಲೆಗಳಲ್ಲಿ ಯಾರು ಯಾರು ಅಪ್ಲಿಕೇಷನ್ ಹಾಕುತ್ತಾರೆ ಅವರಿಗೆ ಹಂಚುವ ವ್ಯವಸ್ಥೆ ಮಾಡುತ್ತೀರಾ ? ಆ ಬಗ್ಗೆ ಚಿಂತನೆ ಏನಾದರೂ ಇದೆಯೇ ?

ಶ್ರೀ ಡಿ. ಮಂಜುನಾಥ್.—ಆ ಚಿಂತನೆ ಮಾಡಿಲ್ಲ. ನರ್ಸರಿಯನ್ನು ಅವರಿಗೇ ಬಿಟ್ಟಿದ್ದೇವೆ. ಪ್ರೈಮರಿ ಶಾಲೆಗಳಿಗೆ ನಿಯಮಗಳು ಇವೆ. ಆ ಪ್ರಕಾರ ಅವರು ನಡೆದುಕೊಳ್ಳುತ್ತಿದ್ದಾರೆ. ಈಗ ಇರುವ ವ್ಯವಸ್ಥೆಯಲ್ಲಿ ಇನ್ನೂ ಮಾರ್ಪಾಟು ಮಾಡಬೇಕು ಎಂದು ನಾವು ಯೋಚನೆ ಮಾಡುತ್ತಿದ್ದೇವೆ ಸಮಗ್ರ ಮಸೂದೆ ಜಾರಿಗೆ ಬಂದಮೇಲೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಿಸುತ್ತೇವೆ.

ಸವದತ್ತಿಯಲ್ಲಿ ವಿಜ್ಞಾನ ಕಾಲೇಜು ಮಂಜೂರಾತಿ ಬಗ್ಗೆ

೧೨೪ (೫೮೭) ಶ್ರೀ ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿಗೆ ಸರ್ಕಾರಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ಮಂಜೂರಾತಿ ಬದಲಾಗಿ ಕಲೆ ಕಾಲೇಜನ್ನು ಮಂಜೂರು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ೧೯೮೭-೮೮ನೇ ಶೈಕ್ಷಣಿಕ ವರ್ಷದಲ್ಲಾದರೂ ಪ್ರಥಮ ದರ್ಜೆ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಇಲ್ಲಿಗೆ ಯಾವುದೇ ಕಾಲೇಜು ಮಂಜೂರಾಗಿಲ್ಲ.

ಆ) ಪರಿಶೀಲಿಸಲಾಗುವುದು.

ಶ್ರೀ ಚಂದ್ರಶೇಖರ ಮಾಮನಿ.—ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ಯಾವುದೇ ಕಾಲೇಜು ಮಂಜೂರಾಗಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಹೋದ ತಿಂಗಳು ಕರ್ನಾಟಕ ವಿಶ್ವವಿದ್ಯಾನಿಲಯದವರು ಇನ್ಸ್‌ಪೆಕ್ಷನ್‌ಗೆ ಬಂದಿದ್ದು ನಿಮಗೆ ಕಲೆ ಕಾಲೇಜು ಸ್ಯಾಂಕ್ಷನ್ ಆಗಿದೆಯಾದ್ದರಿಂದ ಏನೇನು ವ್ಯವಸ್ಥೆ ಇದೆ ಎಂಬುದನ್ನು ನೋಡುವುದಕ್ಕೆ ಬಂದಿದ್ದೇವೆಂದು ತಿಳಿಸಿದ್ದಾರೆ, ಈ ಬಗ್ಗೆ ಮಂತ್ರಿಗಳು ಉತ್ತರ ಕೊಡಬೇಕು. ಇಲ್ಲಿ ಪ್ರಥಮ ದರ್ಜೆ ವಿಜ್ಞಾನ ಕಾಲೇಜು ಇಲ್ಲ. ಹೌದಪ್ಪ, ಬಿಟ್ಟರೆ, ಧಾರವಾಡ ಅಥವಾ ಬೆಳಗಾಂಗೆ ವಿದ್ಯಾರ್ಥಿಗಳು ಹೋಗಬೇಕಾದ ಸ್ಥಿತಿ ಇದೆ, ಆದ್ದರಿಂದ ಇಲ್ಲಿ ಕಾಲೇಜು ಸ್ಥಾಪನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಒಂದು ಆದೇಶ ಕೊಡಲಾಗಿದೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಎಂಬುದನ್ನು ನೋಡಿ ಆಫಿಲಿಯೇಷನ್‌ಗೆ ಅರ್ಜಿ ಹಾಕಿ ಎಂದು. ಆ ನಂತರ ಅರ್ಜಿಗಳು ಅಲ್ಲಿಂದ ಶಿಫಾರಸ್ಸಿನೆಂದು ಸರ್ಕಾರಕ್ಕೆ ಬರುತ್ತವೆ. ಪ್ರಥಮ ದರ್ಜೆ ಕಾಲೇಜುಗಳು ಎಲ್ಲೆಲ್ಲಿ ಅವಶ್ಯ ಇದೆ ಎಂಬುದನ್ನು ಅವರು ತಿಳಿಸುತ್ತಾರೆ. ಕಳೆದ ವರ್ಷ ಯಾವುದೇ ಕಾಲೇಜನ್ನು ಕೊಡುವುದು ಬೇಡ ಎಂದು ತೀರ್ಮಾನ ತೆಗೆದುಕೊಂಡಿದ್ದೆವು. ತಮ್ಮ ಭಾಗಕ್ಕೆ ಕಾಲೇಜು ಬೇಕೆಂದು ಮಾನ್ಯ ಸದಸ್ಯರು ನನಗೂ ಬರೆದು ತಿಳಿಸಿದ್ದಾರೆ, ಆದ್ದರಿಂದ ಅದನ್ನು ಪರಿಶೀಲನೆ ಮಾಡುತ್ತೇನೆ. ಅವಶ್ಯಕತೆ ಇದ್ದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಹೂಳು ತುಂಬಿರುವುದರಿಂದ ಉಂಟಾಗಿರುವ ತೊಂದರೆ

೧೨೫೫ (೨೨೨) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಲೋಕೋಪಯೋಗಿ, ಜಲಾಸಂಪನ್ಮೂಲ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಿ ನಿರ್ಮಿಸಿರುವ ಅಣೆಕಟ್ಟುಗಳು ಹಾಗೂ ಕೆರೆಕಟ್ಟೆಗಳಲ್ಲಿ ಪ್ರತಿವರ್ಷ ಹೂಳು ತುಂಬುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಹೂಳು ತುಂಬಿರುವುದರಿಂದ ನೀರು ನಿಲ್ಲುವ ಮಟ್ಟ ಕಡಿಮೆಯಾಗಿ ನಿಗದಿತ ಆಚ್ಚುಕಟ್ಟು ಪ್ರದೇಶಕ್ಕೆ ನೀರು ಒದಗಿಸಲು ತೊಂದರೆಯಾಗುತ್ತಿಲ್ಲವೇ ?

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೆಲವು ಕೆರೆಗಳಲ್ಲಿ ಹೂಳು ತುಂಬಿದೆ.

ಆ) ಹೌದು.

ಇ) ಹೂಳು ತೆಗೆಯುವ ಕೆಲಸವನ್ನು ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಎನ್.ಆರ್.ಇ.ಪಿ. ಮತ್ತು ಡಿ.ಪಿ.ಎ.ಪಿ. ಕಾರ್ಯಕ್ರಮಗಳಲ್ಲಿ ಹಂತಹಂತವಾಗಿ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಬಿ, ಲಕ್ಕಪ್ಪ.—ಅಧ್ಯಕ್ಷರೇ, ಕೆಲವು ಕೆರೆಗಳಲ್ಲಿ ಹೂಳು ತುಂಬಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ''ರಾಜ್ಯದಲ್ಲಿ ಕೋಟಿಗಟ್ಟಲೆ ಹಣ ಖರ್ಚು ಮಾಡಿ ನಿರ್ಮಿಸಿರುವ ಅಣೆಕಟ್ಟುಗಳು ಹಾಗೂ ಕೆರೆಕಟ್ಟೆಗಳಲ್ಲಿ ಪ್ರತಿವರ್ಷ ಹೂಳು ತುಂಬುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ'' ಎಂದು ನಾನು ಪ್ರಶ್ನೆ ಕೇಳಿದ್ದೆ. ಹಾಗಿದ್ದರೆ ಇವತ್ತು ಅಣೆಕಟ್ಟುಗಳಲ್ಲಿ ಹೂಳು ತುಂಬಿಯೇ ಇಲ್ಲವೇ? ಈ ರೀತಿ ಹೂಳು ತುಂಬುವುದರಿಂದ ನೀರಿನ ಮಟ್ಟ ಕಡಿಮೆಯಾಗುತ್ತದೆ ಎಂಬುದನ್ನೂ ಅವರು ಒಪ್ಪಿಕೊಂಡಿದ್ದಾರೆ. ಈ ಹೂಳು ತುಂಬುವುದನ್ನು ತಡೆಗಟ್ಟುವ ದಕ್ಕಾಗಿ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಹೂಳು ತುಂಬುವುದನ್ನು ತಡೆಗಟ್ಟುವುದು ಹಲವಾರು ದೃಷ್ಟಿಯಿಂದ ಕಷ್ಟತರವಾದ ಕೆಲಸ. ಕೆರೆಯ ಮೇಲ್ಭಾಗದಲ್ಲಿ ಏಕೆ, ಕೆರೆಯ ಆಂಗಳವನ್ನೇ ರೈತರು ಉತ್ತಿರುತ್ತಾರೆ. ಮಳೆ ಬಂದಾಗ ಉತ್ತಿರುವ ಮಣ್ಣು ಕೆರೆಯ ಒಳಕ್ಕೆ ಹೋಗುತ್ತದೆ. ಇದನ್ನು ಬಿಡಿಸಬೇಕೆಂದರೆ ನಾವೂ ನೀವೂ ಒಟ್ಟಿಗೇ ಶ್ರಮ ತೆಗೆದುಕೊಳ್ಳಬೇಕಾಗುತ್ತದೆ.